## ಚಿಟ್ಟೆ ಮೊಟ್ಟೆ

ಮುತ್ತಿನ ಮಣಿಗಳಂತೆ ಕಾಣುವ ಇವು ಚಿಟ್ಟೆಯ ಪುಟ್ಟ ಮೊಟ್ಟೆಗಳು. ಹೇಗೆ ಒಪ್ಪ ಓರಣವಾಗಿ ಮೊಟ್ಟೆ ಇಟ್ಟಿದೆ ನೋಡಿ! ನೋಡಿದೊಡನೆ ಕಲಾವಿದ ಯಾವುದೋ ಕಲಾಕೃತಿಯನ್ನು ರಚಿಸಿದ ಹಾಗಿದೆ. ಈ ಚಿತ್ರವನ್ನು ಕಳುಹಿಸಿದವರು ಚಾಮರಾಜನಗರದ ಉಲ್ಲಾಸ ಗೋರೆ.

**-ಜಿ.ಸಿ. ಗದಾಧರ ಭಟ್, ಮೈಸೂರು**





## ಅಯರ್ನ್ ಮ್ಯಾನ್

ನಿರುಪಯುಕ್ತವಾದ ಕಬ್ಬಿಣ ಮತ್ತಿತರ ವಸ್ತುಗಳನ್ನು ಬಳಸಿ ಈಟಿ ಹಿಡಿದು ಕುದುರೆ ಮೇಲೆ ಕುಳಿತ ಸೈನಿಕನ ತರಹ ಅಚ್ಚುಕಟ್ಟಾಗಿ ಜೋಡಿಸಿ ರಚಿಸಿದ ಆಕೃತಿಯಿದು. ಜ್ಞಾನ ನಗರಿ ಧಾರವಾಡದ ಕನ್ನಡ ಸಂಸ್ಕೃತಿ ಭವನದಲ್ಲಿ ಕಂಡು ಬಂದ ಇದು ನೋಡುಗರಲ್ಲಿ ಪುಳಕವನ್ನುಂಟು ಮಾಡುತ್ತದೆ.

**ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**

## ಆಲಿಕೆ ಆಕಾರದ ಅಣಬೆ

ಮಲೆನಾಡಿನಲ್ಲಿ ಮೊದಲ ಮಳೆಗೆ ಹಸಿಯಾದ ಮಣ್ಣಿನಲ್ಲಿ ನೂರಾರು ಅಣಬೆಗಳು ಮೈದಳೆಯುತ್ತವೆ. ಒಂದೊಂದು ಅಣಬೆಯ ವಿನ್ಯಾಸವೂ ವಿಶಿಷ್ಟವಾಗಿದ್ದು ನೋಡಲು ಆಕರ್ಷಕವಾಗಿರುತ್ತದೆ. ಉತ್ತರ ಕನ್ನಡದ ಯಲ್ಲಾಪುರ ತಾಲೂಕಿನ ಹೊನಗದ್ದೆಯ ಕೃಷಿಕರ ಮನೆಯಂಚಿನ ತೋಟದಲ್ಲಿ ಅರಳಿದ ಈ ಅಣಬೆಯ ವಿನ್ಯಾಸ ಆಲಿಕೆಯಾಕಾರ ಪಡೆದಿದೆ.

ಚಿತ್ರ ಬರಹ: **ದತ್ತಾತ್ರೇಯ ಭಟ್ಟ, ಕಣ್ಣಿಪಾಲ ಯಲ್ಲಾಪುರ**

